ಕರ್ನಾಟಕ ಸರ್ಕಾರ

# ಉಪ ತಹಶೀಲ್ದಾರರು, ಕರೂರು ಇವರ ನ್ಯಾಯಾಲಯ, ಕರೂರು.

ಸಂ/ಕಂ/ಹ.ಬ./01/2016-17 ದಿನಾಂಕ:27/05/2016

ಉಪಸ್ಥಿತರು: ಜಿ.ಬೈರಣ್ಣ
ಉಪ ತಹಶೀಲ್ದಾರರು, ಕರೂರು.

| ವಾದಿಗಳು | ಪ್ರತಿವಾದಿಗಳು/ತಕರಾರುದಾರರು |
|---|---|
| 1.ಶ್ರೀ ಟಿ. ಹಂಪಾರೆಡ್ಡಿ ತಂದೆ ದಿವಂಗತ ಟಿ ಹನುಮಂತರೆಡ್ಡಿ ಕರೂರು ಗ್ರಾಮ ಸಿರುಗುಪ್ಪ ತಾ. | ಶ್ರೀ ಗಾದಿಲಿಂಗಪ್ಪ ತಂದೆ ಹನುಮಂತಪ್ಪ ಕರೂರು ಗ್ರಾಮ ಸಿರುಗುಪ್ಪ- ತಾಲೂಕು |

ದಾವಾ ಜಮೀನಿನ ವಿವರ:

| ಗ್ರಾಮದ ಹೆಸರು | ಸರ್ವೆ ನಂ | ವಿಸ್ತೀರ್ಣ (ಎಕರೆ) | ಹ.ಬ ಸಂಖ್ಯೆ: | ವಹಿವಾಟು ಸಂಖ್ಯೆ |
|---|---|---|---|---|
| ಕರೂರು | **138/ಎ** | **0.24** | **ಹೆಚ್.94/2015-16** | **357/2015-16** |

**ಪೀಠಿಕೆ:**

ಸಿರುಗುಪ್ಪ ತಾಲೂಕಿನ ಕರೂರು ಗ್ರಾಮದ ಸರ್ವೆ ನಂ: 138/ಎ ವಿಸ್ತೀರ್ಣ:0.24 ಸೆಂಟ್ಸ್ ಎಕರೆ ಜಮೀನುಗೆ ಸಂಬಂಧಿಸಿದಂತೆ ಪೋತಿ ವಾರಸುದಾರರ ಪ್ರಕಾರ ಟಿ.ಹಂಪಾರೆಡ್ಡಿ ತಂದೆ ದಿವಂಗತ ಟಿ ಹನುಮಂತರೆಡ್ಡಿ ಇವರ ಹೆಸರಿನಲ್ಲಿ ಖಾತೆ ಬದಲಾವಣೆ ಮಾಡಲು ನಮೂನೆ-21 ನ್ನು ಪ್ರಚುರ ಪಡಿಸಲಾಗಿ ನಿಗದಿತ ಅವಧಿಯೊಳಗೆ ಶ್ರೀ ಗಾದಿಲಿಂಗ ತಂದೆ ಹನುಮಂತಪ್ಪ ಕರೂರು ಇವರು ದಿನಾಂಕ:22-02-2016 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಸದ್ರಿ ಕಡತವನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕಂದಾಯ ಪರಿವೀಕ್ಷಕರು ಕರೂರು ಇವರು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕರ್ನಾಟಕ ಭೂಕಂದಾಯ ಕಾಯ್ದೆ 1964 ಕಲಂ 129ರ ಅಡಿಯಲ್ಲಿ ವಿಚಾರಣೆಯನ್ನು ಕೈಗೊಳ್ಳಲು ತಿರ್ಮಾನಿಸುತ್ತಾ ಪ್ರಕರಣದಲ್ಲಿ ವಾದಿ, ಪ್ರತಿವಾದಿಗಳಿಗೆ ವಿಚಾರಣೆಗೆ ಹಾಜರಾಗಲು ಲಿಖಿತ ತಿಳುವಳಿಕೆ ನೋಟೀಸು ನೀಡುತ್ತಾ ವಿಚಾರಣೆಯನ್ನು ದಿನಾಂಕ: 22/04/2016, 29/04/2016, ಮತ್ತು 13/05/2016 ಮತ್ತು 20-05-2015 ರಂದು ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆ ನಡೆಸಲಾಯಿತು.

ವಿ:

ವಾದಿಗಳಾದ ಶ್ರೀ ಟಿ.ಹಂಪಾರೆಡ್ಡಿ ತಂದೆ ದಿವಂಗತ ಟಿ.ಹನುಮಂತರೆಡ್ಡಿ ಕರೂರು ಇವರು ಕರೂರು ಗ್ರಾಮದ ಸರ್ವೆನಂಬರ್ 138/ಎ ವಿಸ್ತೀರ್ಣ 0.24 ಸೇಂಟ್ಸ್ ಜಮೀನು ಪೋತಿ ವಾರಸುದಾರರ ಪ್ರಕಾರ ಪಟ್ಟದಾರರ ಹೆಸರಿಗೆ ಅರ್ಜಿ ಸಲ್ಲಿಸಲಾಗಿ ಕರೂರು ಗ್ರಾಮ ಇವರು ದಿನಾಂಕ 22-04-2016ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ ನನ್ನ ತಾತನಾದ ಹನುಮಂತರೆಡ್ಡಿ ಉರಫ್ ಹನುಮಂತಪ್ಪ ತಂದೆ ಗೋವಿಂದರೆಡ್ಡಿ ಇವರು ದಿನಾಂಕ 24-07-1984ರಂದು ಮರಣ ಹೊಂದಿರುತ್ತಾರೆ ನನ್ನ ಅವ್ವ ಹನುಮಕ್ಕ ದಿನಾಂಕ 21-06-2002ರಂದು ಮರಣ ಹೊಂದಿರುತ್ತಾರೆ ನನ್ನ ತಾಯಿಯಾದ ನಾರಾಯಣಮ್ಮ ಗಂಡ ಟಿ.ಹಂಪಾರೆಡ್ಡಿ ದಿನಾಂಕ 10-06-1985 ರಲ್ಲಿ ಮರಣ ಹೊಂದಿರುತ್ತಾರೆ ನನ್ನ ಅಣ್ಣನಾದ ದೇವರೆಡ್ಡಿ ದಿನಾಂಕ 13-10-1998 ರಲ್ಲಿ ಮರಣ ಹೊಂದಿರುತ್ತಾರೆ ಹನುಮಂತಪ್ಪ ಇವರಿಂದ ಟಿ.ಹಂಪಾರೆಡ್ಡಿ ಇವರ ಹಸರಿಗೆ ಪೋತಿ ವಾರಸುದಾರರ ಪ್ರಕಾರ ಪಟ್ಟ ಬದಲಾವಣೆ ಮಾಡಲು ಸದರಿ ವಿಚಾರಣಾ ದಿನಾಂಕಗಳಂದು ಹೇಳಿಕೆ ನೀಡಿರುತ್ತಾರೆ ಎಂದು ಗ್ರಾಮಲೆಕ್ಕಾಧಿಕಾರಿಗಳು ವರದಿ ನೀಡಿರುತ್ತಾರೆ ಕಾರಣ ಪ್ರತಿವಾದಿಗಳು ಸತತವಾಗಿ ಗೈರು ಹಾಜರಾಗಿರುತ್ತಾರೆ ಯಾವುದೇ ಲಿಖಿತ ಹೇಳಿಕೆಗಳನ್ನು ನೀಡಿರುವುದಿಲ್ಲ

ಪ್ರತಿವಾದಿ

ಪ್ರತಿವಾದಿಗಳಾದ ಗಾದಿಲಿಂಗ ತಂದೆ ಹನುಮಂತ ಕರೂರು ಇವರು ಕರೂರು ಗ್ರಾಮದ ಸರ್ವೆ ನಂಬರ್ 138/ಎ ವಿಸ್ತೀರ್ಣ 0.24 ಸೇಂಟ್ಸ್ ಜಮೀನು ಪೋತಿ ವಾರಸುದಾರರ ಪ್ರಕಾರ ಪಟ್ಟದಾರರಾಗಿ ಟಿ. ಹಂಪಾರೆಡ್ಡಿ ತಂದೆ ಟಿ.ಹನುಮಂತರೆಡ್ಡಿ ಕರೂರು ಇವರು ಅರ್ಜಿ ಸಲ್ಲಿಸಿದ್ದು ದಿನಾಂಕ 22-02-2016 ರಂದು ದಿನಾಂಕ 22-04-2016,29-04-2016, 13-05-2016, 20-05-2016ರಂದು ವಿಚಾರಣೆಗಳಿಗೆ ಹಾಜರು ಆಗಿರುವುದಿಲ್ಲ ಸದ್ರಿ ನೋಟಿಸ್ ಜಾರಿ ಮಾಡಲು ಗ್ರಾಮಲೆಕ್ಕಧಿಕಾರಿಗಳಿಗೆ ಇವರಿಗೆ ನೀಡಿದ್ದು ಸದ್ರಿ ಗ್ರಾಮದಲ್ಲಿ ವಿಚಾರಿಸಲಾಗಿ ಯಾರೆಂದು ತಿಳಿದು ಬಂದಿರುವುದಿಲ್ಲ ಕಾರಣ ಗ್ರಾಮದ ಚಾವಡಿಯಲ್ಲಿ ನೋಟಿಸ್ ಪ್ರತಿಯನ್ನು ಪ್ರಚರಿಸಲಾಗಿದೆ. ಎಂದು ಗ್ರಾಮಲೆಕ್ಕಾಧಿಕಾರಿಗಳು ವರದಿ ನೀಡಿರುತ್ತಾರೆ ಕಾರಣ ಪ್ರತಿವಾದಿಗಳು ಸತತವಾಗಿ ಗೈರು ಹಾಜರಾಗಿರುತ್ತಾರೆ ಯಾವುದೇ ಲಿಖಿತ ಹೇಳಿಕೆಗಳನ್ನು ನೀಡಿರುವುದಿಲ್ಲ

ವಾದಿಗಳ ವಾದವನ್ನು ಆಲಿಸಿ ವಿಚಾರಣೆ ಮಾಡಲಾಗಿ ಸದರಿ ಜಮೀನು ಪೋತಿ ವಾರಸುದಾರರ ಪ್ರಕಾರ ಇವರ ಹೆಸರಿಗೆ ಹಕ್ಕು ಬದಲಾವಣೆ ಮಂಜೂರು ಮಾಡಲು ಈಕೆಳಕಂಡಂತೆ-

-::ಆದೇಶ::-

ಪೀಠಿಕೆಯಲ್ಲಿ ವಿವರಿಸಿದಂತೆ ಸಿರುಗುಪ್ಪ ತಾಲೂಕಿನ ಕರೂರು ಗ್ರಾಮದ ಸರ್ವೆ ನಂಬರ್. 138/ಎ ವಿಸ್ತೀರ್ಣ:0.24 ಎಕರೆ ಸೇಂಟ್ಸ್ ಜಮೀನು ಪೋತಿ ವಾರಸುದಾರರ ರನ್ವಯ ಶ್ರೀ ಟಿ.ಹಂಪಾರೆಡ್ಡಿ ತಂದೆ ದಿವಂಗತ ಟಿ.ಹನುಮಂತರೆಡ್ಡಿ ಕರೂರು **ಇವರ** ಹೆಸರಿಗೆ ಹಕ್ಕು ಬದಲಾವಣೆ ಮಂಜೂರು ಮಾಡಲು ಆದೇಶಿಸಿದೆ

ಈ ಆದೇಶವನ್ನು ದಿನಾಂಕ: 27-05-2016 ರಂದು ಹಕ್ಕು ಬದಲಾವಣೆ ಮಾಡಲು ತೆರೆದ ನ್ಯಾಯಾಲಯದಲ್ಲಿ ಘೋಷಣೆ ಮಾಡಲಾಗಿದೆ.

27/5/16

ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ, ಕರೂರು.
ಕರೂರು, ಸಿರುಗುಪ್ಪ ತಾ

ಇದರ ಪ್ರತಿಯನ್ನು:
1.ವಾದಿ ಹಾಗೂ ಪ್ರತಿವಾದಿಗಳು.
2.ತಹಶೀಲ್ದಾರರ ಕಾರ್ಯಾಲಯ, ಸಿರುಗುಪ್ಪ ಗಣಕೀಕರಣ
ಶಾಖೆ ಮುಂದಿನ ಕ್ರಮಕ್ಕಾಗಿ.